**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀಮತಿ ಬಲ್ಕಿಸ್ ಬಾನು ಇವರು ನಿಯಮ-330ರ ಅಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರ.**

**ವಿಷಯ**

ವೃತ್ತಿ ಶಿಕ್ಷಣದ ಕೋರ್ಸುಗಳು ಸಂಭಾವನೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದು, 3746 ಅರೆಕಾಲಿಕ ಬೋಧಕ/ಬೋಧಕೇತರ ಸಿಬ್ಬಂದಿಯನ್ನು ಅವರ ವಿದ್ಯಾರ್ಹತೆಗೆ ಅನುಗುಣವಾಗಿ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಎದುರು ಒಂದು ಬಾರಿ ವಿಶೇಷ ನೇಮಕಾತಿ ನಿಯಮಗಳನ್ವಯ 3216 ನೌಕರರನ್ನು ದಿನಾಂಕ:06.04.2011 ರಂದು ವಿಲೀನಗೊಳಿಸಿ ಖಾಯಂ ಗೊಳಿಸಿರುವುದು ಸರಿಯಷ್ಟೇ ಆದರೆ ಅದರಲ್ಲಿ 253 ಸಿಬ್ಬಂದಿಗಳ ಪೈಕಿ ಹಲವರು ಮರಣ ಹೊಂದಿದ್ದು ಮತ್ತು ನಿವೃತ್ತಿ ಹೊಂದಿದ್ದು ಇದರಲ್ಲಿ 253 ನೌಕರರನ್ನು EP 12 TVE 2024 ಸಂಚಿವ ಸಂಪುಟಕ್ಕೆ ತರಿಸಿಕೊಂಡು ಅನುಮೋದನೆ ನೀಡಿ ವಯೋ ನಿವೃತ್ತಿಯ ಅಂಚಿನಲ್ಲಿರುವ ಹಾಗೂ ತೀರಾ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿರುವ ನೌಕರರಿಗೆ ವಿಶೇಷ ನೇಮಕಾತಿ ನಿಯಮಗಳನ್ವಯ ನೂತನ ವಿಧೇಯಕವನ್ನು ಜಾರಿಗೊಳಿಸಲು ಕುರಿತು ಸದನದಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

**ಉತ್ತರ**

ಸರ್ಕಾರದ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ 22 ಶಾಸನ 2011, ದಿನಾಂಕ: 06.04.2011 ರ ಕರ್ನಾಟಕ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರನ್ನು ವಿಲೀನಗೊಳಿಸುವ ಅಧಿನಿಯಮ 2011ರ ಕಲಂ 3 (ಎ) ರನ್ವಯ ವೃತ್ತಿ ಶಿಕ್ಷಣ ಇಲಾಖೆಯಲ್ಲಿ ದಿನಾಂಕ:06.04.2011 ರವರೆಗೆ "ಯಾವೊಬ್ಬ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರನನ್ನು ಆತನಿಗೆ ನೇರವಾಗಿ ಅನ್ವಯಿಸಬಹುದಾದಂಥ ಕಾರಣಗಳಿಗಾಗಿ ಆತನು ಸೇವಾ ಭಂಗವಿಲ್ಲದೆ 05 ವರ್ಷಗಳಿಗೆ ಕಡಿಮೆ ಇಲ್ಲದಂತೆ ನಿರಂತರವಾಗಿ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರನಾಗಿ ಕರ್ತವ್ಯವನ್ನು ನಿರ್ವಹಿಸಿದ್ದ ಹೊರತು, ವಿಲೀನಗೊಳಿಸತಕ್ಕದ್ದಲ್ಲ" ಎಂದು ಸೂಚಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ಅಧಿಸೂಚನೆಯ ಪೂರ್ವದಲ್ಲಿ 3746 ಅರೆಕಾಲಿಕ ನೌಕರರು ವೃತ್ತಿ ಶಿಕ್ಷಣ ಇಲಾಖೆಯಲ್ಲಿ ಸೇವೆಸಲ್ಲಿಸುತ್ತಿದ್ದು, ಸದರಿ ವಿಲೀನ ವಿಧೇಯಕದ್ವಯ, ನಿರಂತರವಾಗಿ 05 ವರ್ಷ ಸೇವೆ ಪೂರೈಸಿದ್ದ 1263 ಸರ್ಕಾರಿ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅರೆಕಾಲಿಕ ನೌಕರರನ್ನು ಹಾಗೂ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಮತ್ತು ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಸೇವೆ

ಸಲ್ಲಿಸುತ್ತಿದ್ದ 1668 ಅರೆಕಾಲಿಕ ನೌಕರರನ್ನು ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ವಿಲೀನಗೊಳಿಸಿ ಸೇವೆಯನ್ನು ಸಕ್ರಮಗೊಳಿಸಲಾಗಿರುತ್ತದೆ.

ಸದರಿ ಅಧಿನಿಯಮದ ಕಲಂ 3 (ಎ) ರ ಅನುಸಾರ ವೃತ್ತಿ ಶಿಕ್ಷಣ ಇಲಾಖೆಯಲ್ಲಿ ಅರೆಕಾಲಿಕ ನೌಕರರಾಗಿ ನಿರಂತರ 05 ವರ್ಷ ಸೇವೆ ಸಲ್ಲಿಸದ (ಸೇವಾಭಂಗವಾಗಿರುವ) ಉಳಿದ 815 ಅರೆಕಾಲಿಕ ನೌಕರರನ್ನು ವಿಲೀನ ಪ್ರಕ್ರಿಯೆಯಿಂದ ಕೈಬಿಟ್ಟು ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿರುತ್ತದೆ.

ಮುಂದುವರೆದು, ಸದರಿ ಅಧಿನಿಯಮದ ಕಲಂ 3(1)ರ ಅನುಸಾರ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರ ವಿಲೀನಾತಿ ಪ್ರಕ್ರಿಯೆಯು ಒಂದು ಸಲದ ಕ್ರಮವಾಗಿದ್ದು ತಿದ್ದುಪಡಿಗೆ ಅವಕಾಶವಿರುವುದಿಲ್ಲ. ಈ ಕುರಿತು ನೌಕರರಿಂದ ಸ್ವೀಕೃತವಾಗಿದ್ದ ಮನವಿಗಳ ಹಿನ್ನೆಲೆಯಲ್ಲಿ ವಿಲೀನಾತಿ ಪ್ರಕ್ರಿಯೆಯಿಂದ ಬಾಕಿ ಉಳಿದ ಅರೆಕಾಲಿಕ ನೌಕರರನ್ನು ವಿಶೇಷ ನೇಮಕಾತಿ ನಿಯಮಗಳನ್ವಯ ನೂತನ ವಿಧೇಯಕವನ್ನು ತಿದ್ದುಪಡಿ ಮಾಡಲು ಅಥವಾ ಪುನಃ ತೆರೆಯುವ ಕುರಿತಂತೆ ಕಾನೂನು ಇಲಾಖೆಯ ಅಭಿಪ್ರಾಯ ಪಡೆಯಲಾಗಿದ್ದು "ಸಿವಿಲ್ ಅಪೀಲು ಸಂಖ್ಯೆ:3595-3612/1999 ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ: 10.04.2006 ರಂದು ನೀಡಿರುವ ತೀರ್ಪಿನಲ್ಲಿರುವ ಅವಕಾಶದ ಹಿನ್ನೆಲೆಯಲ್ಲಿ ಈ ಮೊದಲೇ ದಿನಾಂಕ:06.04.2011ರಂದು ಮಾಡಲಾದ ಸಂವ್ಯಶಾಇ 22 ಶಾಸನ 2011, ರಲ್ಲಿ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರನ್ನು ವಿಲೀನಗೊಳಿಸುವ ಅಧಿನಿಯಮವು ಊರ್ಜಿತವಾಗಿರುತ್ತದೆ. ಆದರೆ ಅಧಿನಿಯಮವನ್ನು ಪುನಃ ತೆರೆಯಲು ಅವಕಾಶವಿರುವುದಿಲ್ಲ ಮತ್ತು ಸದರಿ ಅಧಿನಿಯಮಕ್ಕೆ ತಿದ್ದುಪಡಿ ತರುವುದು ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನಗಳಿಗೆ ವ್ಯತಿರಿಕ್ತವಾಗುತ್ತದೆ. ಆದುದರಿಂದ, ಸದರಿ ವಿಲೀನ ವಿಧೇಯಕ-2011ನ್ನು ಪುನಃ ತೆರೆಯುವುದಾಗಲೀ ಅಥವಾ ತಿದ್ದುಪಡಿ ಮಾಡುವುದಾಗಲೀ ಅವಕಾಶವಿರುವುದಿಲ್ಲವೆಂದು ಅಭಿಪ್ರಾಯ ನೀಡಿರುತ್ತದೆ. ಈ ಹಿನ್ನೆಲೆಯಲ್ಲಿ ವಿಲೀನಾತಿ ವಿಧೇಯಕಕ್ಕೆ ತಿದ್ದುಪಡಿ ಮಾಡಲು ಅಥವಾ ವಿಶೇಷ ನೇಮಕಾತಿ ನಿಯಮಗಳನ್ನು ರಚಿಸಲು ಅವಕಾಶವಿರುವುದಿಲ್ಲ.

**ಸಂಖ್ಯೆ:ಇಪಿ 25 ಟಿವಿಇ 2024**

(ಎಸ್.ಮಧುಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ
ಇಲಾಖಾ ಸಚಿವರು